# ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ. 35/2019**

**ಚಾಸಾಃ 4 / ಫ್ರಾಸಾಃ 3**

**ದಿನಾಂಕಃ 03-06-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ವಿಜಯಲಕ್ಷ್ಮಿ ಮೊರಬದ |
| ತಂದೆ/ಗಂಡನ ಹೆಸರು | ಪ್ರದೀಪ |
| ವಯಸ್ಸು | 28 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸ | ಭೈರನಹಟ್ಟಿ |

## ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ

ಆರೋಪಿತನ ಪರಿಚಯ ಇದೆ. ಚಾಸಾ-1 ನನ್ನ ಗಂಡ, ಚಾಸಾ-5 ರಿಂದ 10 ರವರ ಪರಿಚಯ ಇದೆ. ದಿಃ 20-11-2018 ರಂದು ಬೆಳಿಗ್ಗೆ 10.30 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-5 ನಾವು ಮನೆಯಲ್ಲಿದ್ದಾಗ ಚಾಸಾ-1 ರವರು ಜಮೀನಿಂದ ಕೆಲಸ ಮುಗಿಸಿಕೊಂಡು ಮನೆಗೆ ಬಂದಿರುತ್ತಾರೆ. ಚಾಸಾ-1 ರವರಿಗೆ ಊಟ ನೀಡಿ ಚಾಸಾ-5 ರವರೊಂದಿಗೆ ಮಾತನಾಡುತ್ತಾ ಕುಳಿತಿರುತ್ತೇನೆ. ಆ ಸಮಯದಲ್ಲಿ ಚಾಸಾ-1 ರವರು ಮನೆಯಿಂದ ಹೊರಗೆ ಹೋಗಿರುತ್ತಾರೆ. ಅದೇ ಸಮಯದಲ್ಲಿ ನಮ್ಮ ಓಣಿಯಲ್ಲಿ ಒಬ್ಬ ವ್ಯಕ್ತಿಯು ಬಂಗಾರದ ಆಭರಣಗಳನ್ನು ತೊಳೆದು ಕೊಡುತ್ತೇನೆ ಎಂದು ಕೂಗುತ್ತಾ ಬಂದಿರುತ್ತಾನೆ. ನನ್ನ ಬಂಗಾರದ ಚೈನ ಬಣ್ಣ ಕಡಿಮೆ ಆಗಿದ್ದರಿಂದ ಅದನ್ನು ತೊಳೆಯಲು ಸದರಿ ವ್ಯಕ್ತಿಗೆ ನೀಡಿರುತ್ತೇನೆ. ಅದೇ ಸಮಯದಲ್ಲಿ ಚಾಸಾ-5 ರವರೂ ಸಹ ತನ್ನ ತಾಳಿ ಚೈನನ್ನು ತೊಳೆಯಲು ಸದರಿ ವ್ಯಕ್ತಿಗೆ ನೀಡಿರುತ್ತಾರೆ. ನಂತರ ಸದರಿ ವ್ಯಕ್ತಿಯು ತಾನು ತಂದಿದ್ದ ಯಾವುದೋ ಎಣ್ಣೆ ಎಂದು ಸದರಿ ಚೈನಗಳನ್ನು ಹಾಕಿರುತ್ತಾನೆ. ಆತನ ಮೇಲೆ ಸಂಶಯಗೊಂಡು ಸದರಿ

ಚೈನಗಳನ್ನು ಆತನಿಂದ ಪಡೆದುಕೊಂಡಾಗ ಆತ ನಮ್ಮನ್ನು ಹೆದರಿಸಿ ಸದರಿ ಚೈನಗಳನ್ನು ಮರಳಿ ಕೊಡಲು ಹೇಳಿರುತ್ತಾನೆ. ನಾವು ಸದರಿ ಚೈನಗಳನ್ನು ಆತನಿಗೆ ನೀಡಲು ನಿರಾಕರಿಸಿದಾಗ ಆತ ಕೈಯಿಂದ ನಮಗೆ ಹೊಡೆದು, ನಮ್ಮ ಹತ್ತಿರ ಇದ್ದ ತಾಳಿ ಚೈನಗಳನ್ನು ಕಿತ್ತುಕೊಂಡು ಓಡಿ ಹೋದನು. ಕೂಡಲೇ ನಾನು ಮತ್ತು ಚಾಸಾ–5 ಕೂಗಿಕೊಂಡಿದ್ದರಿಂದ ಹತ್ತಿರದ ಅಂಗಡಿಯ ಹತ್ತಿರ ಇದ್ದ ಚಾಸಾ–1, 6, 7 ರವರು ನಮ್ಮ ಹತ್ತಿರ ಬಂದು ವಿಚಾರಣೆ ಮಾಡಿರುತ್ತಾರೆ. ಆ ಸಮಯದಲ್ಲಿ ನಡೆದ ವಿಷಯವನ್ನು ನಾನು ಮತ್ತು ಚಾಸಾ–5 ಸದರಿಯವರಿಗೆ ತಿಳಿಸಿರುತ್ತೇವೆ. ಕಾರಣ ಸದರಿ ವ್ಯಕ್ತಿಯನ್ನು ಹಿಡಿಯಲು ಅವರು ಹೋಗಿರುತ್ತಾರೆ. ನಾನು ಮತ್ತು ಚಾಸಾ–5 ಭೈರನಹಟ್ಟಿ ಗ್ರಾಮದ ಬಸ್ ನಿಲ್ದಾಣದ ಕಡೆಗೆ ಆತನನ್ನು ಹುಡುಕುತ್ತಾ ಹೋಗುವಾಗ ಚಾಸಾ–1, 6, 7 ರವರು ಬಸ್ ನಿಲ್ದಾಣದ ಹತ್ತಿರ ಸದರಿ ವ್ಯಕ್ತಿಯನ್ನು ಹಿಡಿದಿದ್ದರು. ಸದರಿಯವರು ಆತನನ್ನು ವಿಚಾರಣೆ ಮಾಡಿದಾಗ ಆತ ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ ಚಾಸಾ–1, 6, 7 ರವರು ಆತನ ಬ್ಯಾಗನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಕೆಲವು ಡಬ್ಬಿಗಳು, ಎಣ್ಣೆ ಮತ್ತು ನಮ್ಮ ಬಂಗಾರದ ಚೈನ ತುಂಡುಗಳಾಗಿ ಇರುವುದು ಕಂಡು ಬಂದಿರುತ್ತದೆ. ಸದರಿ ವ್ಯಕ್ತಿಯನ್ನು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ದೀಪಕಕುಮಾರ ಯಾದಾವ, ಸಾಃ ಜದಿಯಾ, ಬಿಹಾರ ರಾಜ್ಯ ಎಂದು ತಿಳಿಸಿರುತ್ತಾನೆ. ನಂತರ ಚಾಸಾ–1, 6, 7 ರವರು ಸದರಿ ವ್ಯಕ್ತಿಯನ್ನು ಕರೆದುಕೊಂಡು ಠಾಣೆಗೆ ಹೋಗಿರುತ್ತಾರೆ. ಪ್ರಕರಣದ ಕುರಿತು ಅದೇ ದಿನ ಚಾಸಾ–1ರವರು ದೂರು ಸಲ್ಲಿಸಿರುತ್ತಾರೆ. ಈ ಎಲ್ಲ ವಿಷಯಗಳ ಕುರಿತು ಅದೇ ದಿನ ಪೊಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸ್ವಲ್ಪ ದಿನಗಳ ನಂತರ ಚಾಸಾ–1ರವರು ಪೋಲಿಸರಿಗೆ ಅರ್ಜಿ ಸಲ್ಲಿಸಿ 4 ಬಂಗಾರದ ತಾಳಿ ಪದಕ, 6 ಬಂಗಾರದ ಗುಂಡು, 2 ಹವಳ, 25 ಕರಿಮಣಿ, ತುಂಡಾದ ತಾಳಿ ಚೈನ ಒಟ್ಟು 22.490 ಗ್ರಾಂ ಬಂಗಾರದ ವಸ್ತುಗಳನ್ನು ಠಾಣೆಯಿಂದ ಬಿಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲಿಸರು ನಿಪಿ–13 ಫೋಟೋ ಪಡೆದಿರುತ್ತಾರೆ. ನಮ್ಮಿಂದ ಆಭರಣಗಳನ್ನು ಕಳ್ಳತನ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ

## ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ. 35/2019**

**ಚಾಸಾಃ1 / ಫ್ರಾಸಾಃ 2**

**ದಿನಾಂಕಃ 03-06-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಸಾಕ್ಷಿದಾರರ ಹೆಸರು | ಪ್ರದೀಪ ಮೊರಬದ |
| ತಂದೆ/ಗಂಡನ ಹೆಸರು | ರಾಮಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ಭೈರನಹಟ್ಟಿ |

**ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಆರೋಪಿತನ ಪರಿಚಯ ಇದೆ. ಚಾಸಾ-4 ನನ್ನ ಹೆಂಡತಿ, ಚಾಸಾ-5 ರಿಂದ 10 ರವರ ಪರಿಚಯ ಇದೆ. ದಿಃ 20-11-2018 ರಂದು ಜಮೀನು ಕೆಲಸ ಮುಗಿಸಿಕೊಂಡು ಬೆಳಿಗ್ಗೆ 10.30 ಗಂಟೆಗೆ ಮನೆಗೆ ಬಂದಿದ್ದು, ಮನೆಯ ಪಕ್ಕದಲ್ಲಿದ್ದ ಚಹಾದ ಅಂಗಡಿಯ ಮುಂದೆ ಚಾಸಾ-6,7 ರವರೊಂದಿಗೆ ಕುಳಿತಿದ್ದೇನು. ಆ ಸಮಯದಲ್ಲಿ ಚಾಸಾ-4 ಮತ್ತು 5 ರವರು ಕೂಗುತ್ತಾ ಬರುತ್ತಿರುವುದು ಕಂಡು ಬಂದಿದ್ದು, ಕೂಡಲೇ ನಾವು 3 ಜನ ಅವರ ಹತ್ತಿರ ಹೋಗಿ ವಿಚಾರಣೆ ಮಾಡಿರುತ್ತೇವೆ. ಆ ಸಮಯದಲ್ಲಿ ಚಾಸಾ-4 , 5 ರವರು ತಮ್ಮ ಬಂಗಾರದ ಚೈನನ್ನು ತೊಳೆಯಲು ಮನೆಯ ಹತ್ತಿರ ಬಂದಿದ್ದ ಒಬ್ಬ ವ್ಯಕ್ತಿಗೆ ನೀಡಿದ್ದು, ಸದರಿ ವ್ಯಕ್ತಿಯು ಸದರಿ ಚೈನಗಳನ್ನು ತೊಳೆದಿದ್ದು ಆದರೆ ಸದರಿ ಚೈನ ಹಲವು ತುಂಡುಗಳಾಗಿ ಸದರಿ ವ್ಯಕ್ತಿಯ ಪಾತ್ರೆಯಲ್ಲಿ ಬಿದ್ದಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು ಸದರಿ ತುಂಡುಗಳನ್ನು ಮಾತ್ರ ಪಡೆದುಕೊಂಡಿದ್ದು ಕರಗಿದ ಬಂಗಾರವನ್ನು ನೀಡಲು ಕೇಳಿದಾಗ ಸದರಿ ವ್ಯಕ್ತಿಯು ತಮಗೆ ಬೆದರಿಸಿ ತೆಗೆದುಕೊಂಡು ಹೋಗಿರುತ್ತಾನೆ

ಎಂದು ತಿಳಿಸಿರುತ್ತಾರೆ. ಕೂಡಲೇ ನಾನು, ಚಾಸಾ–6, 7 ಸೇರಿ ಸದರಿ ವ್ಯಕ್ತಿಯನ್ನು ಹಿಂಬಾಲಿಸಿ, ಭೈರನಹಟ್ಟಿ ಬಸ್ ನಿಲ್ದಾಣದ ಹತ್ತಿರ ಆತನನ್ನು ಹಿಡಿದುಕೊಂಡಿರುತ್ತೇವೆ. ವಿಚಾರಣೆ ಮಾಡಿದಾಗ ಸದರಿ ವ್ಯಕ್ತಿಯು ಯಾವುದೇ ಉತ್ತರ ನೀಡಿರುವುದಿಲ್ಲ ಕಾರಣ ಆತನನ್ನು ಠಾಣೆಗೆ ಕರೆದುಕೊಂಡು ಹೋಗಿ ಹಾಜರು ಪಡಿಸಿರುತ್ತೇವೆ. ಠಾಣೆಯಲ್ಲಿ ಪೋಲಿಸರು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ದೀಪಕಕುಮಾರ ಯಾದವ, ಸಾಃಜದಿಯಾ, ಬಿಹಾರ ರಾಜ್ಯ ಎಂದು ತಿಳಿಸಿರುತ್ತಾನೆ. ಸದರಿ ಘಟನೆಯು ಬೆಳಿಗ್ಗೆ 10.30 ಗಂಟೆಗೆ ನಮ್ಮ ಮನೆಯ ಹತ್ತಿರ ಆಗಿರುತ್ತದೆ. ಸದರಿ ವ್ಯಕ್ತಿಯು ಚಾಸಾ–4 ಮತ್ತು 5 ರವರನ್ನು ಬೆದರಿಸಿ ಕರಗಿದ ಬಂಗಾರವನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾನೆ. ಈ ಎಲ್ಲ ವಿಷಯಗಳ ಕುರಿತು ಅದೇ ದಿನ ಪೋಲಿಸರಿಗೆ ದೂರು ನೀಡಿರುತ್ತೇನೆ. ದೂರನ್ನು ನಿಪಿ–11 ಎಂದು, ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–4 ರವರ ಬಂಗಾರದ ತಾಳಿಯ ಚೈನ ತೂಕ 25 ಗ್ರಾಂ ಎಂದು ಮತ್ತು ಚಾಸಾ–5 ರವರ ತಾಳಿ ಚೈನನ ತೂಕ 25 ಗ್ರಾಂ ಆಗಿತ್ತು ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನಂತರ ದಿಃ12–12–2018 ರಂದು ಮುಚ್ಚಳಿಕೆ ಪತ್ರ ಬರೆದುಕೊಟ್ಟು ಪ್ರಕರಣದಲ್ಲಿ ಜಪ್ತು ಮಾಡಿಕೊಳ್ಳಲಾದ 4 ಬಂಗಾರದ ತಾಳಿ ಪದಕ, 6 ಬಂಗಾರದ ಗುಂಡು, 2 ಹವಳ, 25 ಕರಿಮಣಿ, ತುಂಡಾದ ತಾಳಿ ಚೈನ ಒಟ್ಟು 22.490 ಗ್ರಾಂ ಬಂಗಾರದ ವಸ್ತುಗಳನ್ನು ನನ್ನ ಸ್ವಾಧೀನಕ್ಕೆ ಪಡೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಪೊಲಿಸರು ಫೋಟೋ ಪಡೆದಿರುತ್ತಾರೆ. ಮುಚ್ಚಳಿಕೆ ಪತ್ರವನ್ನು ನಿಪಿ–12 ಎಂದು, ಫೋಟೋವನ್ನು ನಿಪಿ–13 ಎಂದು, ಸಾಕ್ಷಿಯ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ